ಓ ಎಸ್ ನಂಬರ 183/2019
ಪಿ. ಡಬ್ಲ್ಯೂ -1

**ದಿನಾಂಕ: 13.06.2025.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: 6(a) to (c) ಮತ್ತು (e) ಮತ್ತು 7(a) to (c) ಮತ್ತು (e) ನೇ ಪ್ರತಿವಾದಿ ಪರ ಶ್ರೀ ಆರ್ ಬಿ ಆರ್ ವಕೀಲರಿಂದ:**

ನಾನು 1986 ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆಯಾಗಿರುತ್ತೇನೆ. 2006 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ಸದರಿ ಅವಧಿಯಲ್ಲಿ ನಾನು ಊರಿಗೆ ಬಂದು ಹೋಗಿ ಮಾಡುತ್ತಿದ್ದೇನು. ಆಗ ದಾವಾ ಜಮೀನಿಗೆ ಹೋಗಿ ಬರುತ್ತಿದ್ದೇನು. ಆ ಕಾಲಕ್ಕೆ ದಾವಾ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿರುತ್ತೇನೆ. 2 ರಿಂದ 7 ನೇ ವಾದಿಯರು ಆ ಕಾಲಕ್ಕೆ ದಾವಾ ಜಮೀನಿನ ಕಬ್ಜಾದಲ್ಲಿದ್ದರು ಎಂದರೆ ಸರಿ. ಅವರಿಗೆ ದಾವಾ ದಾಖಲೆಗಳ ಬಗ್ಗೆ ಮಾಹಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅವಧಿಯಲ್ಲಿ ನಾನಗಲೀ, ವಾದಿಯರಾಗಲೀ ದಾವಾ ಜಮೀನಿಗೆ ಸಂಬಧಿಸಿದಂತೆ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಮಗೆ ದಾವಾ ಕಾರಣ 2019ಗಿಂತ ಮೊದಲು ಉದ್ಭವಿಸಿರುವುದಿಲ್ಲ.

ಪ್ರತಿವಾದಿ ನಂಬರ 6 ಮತ್ತು 7 ರವರು ದಿನಾಂಕ 15.06.1970 ಖರೀದಿ ಪತ್ರ ಮಾಡಿಕೊಂಡು ದಿನಾಂಕ 22.06.1970 ರಂದು ದುರಸ್ತಿ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ರದ್ದುಗೊಳಿಸಲು ಯಾವುದೇ ದಾವೆಯನ್ನಾಗಲೀ, ಕ್ರಮವನ್ನಾಗಲೀ ಮಾಡಿರುವುದಿಲ್ಲ. ಪ್ರಸ್ತುತ ದಾವೆ 55 ವರ್ಷಗಳ ವಿಳಂಬವನ್ನು ಹೊಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲದೇ ಇದ್ದ ಕಾರಣ 55 ವರ್ಷಗಳ ಬಳಿಕ ದಾವೆಯನ್ನು ಸಲ್ಲಿಸಿರುತ್ತೇನೆ. 6 ಮತ್ತು 7ನೇ ಪ್ರತಿವಾದಿಗಳು ಅವರ ವಾರಸುದಾರರೊಂದಿಗೆ ಖರೀದಿ ಕಾಲದಿಂದಲೂ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಅಪ್ಪಯ್ಯ ದಳವಾಯಿ ರವರು ಮೃತಹೊಂದಿದ ಬಳಿಕ 1 ರಿಂದ 5 ನೇ ಪ್ರತಿವಾದಿಗಳ ಹೆಸರು ದಿನಾಂಕ 06.05.1947 ರ ಖರೀದಿಯಲ್ಲಿ 76/2 ಕ್ಷೇತ್ರ 3 ಎಕರೆ 14 ಗುಂಟೆ ಮತ್ತು 76/6 ಕ್ಷೇತ್ರ 03 ಎಕರೆ 31 ಗುಂಟೆ ವಾರಸಾನಾತೆಯಲ್ಲಿ ವಾರಸಾ ಡೈರಿ ಸಂಖ್ಯೆ 4031ರಲ್ಲಿ ದಾಖಲಾದ ಬಗ್ಗೆ ನನಗೆ ಗೊತ್ತು. ನನಗೆ ಸದರಿ ವಿಷಯದ ಬಗ್ಗೆ ಮಾಹಿತಿ ಇಲ್ಲದೇ ಇದ್ದ ಕಾರಣ ಸದರಿ ದಾಖಲೆಯನ್ನು ನಾನು ಎಲ್ಲಿಯು ಪ್ರಶ್ನಿಸಿಲ್ಲ. ಪ್ರತಿವಾದಿ ನಂಬರ 6 ಮತ್ತು 7 ರವರ ವಾರಸುದಾರರು ಸಕ್ಷಮ ಪ್ರಾಧಿಕಾರದ ಮುಂದೆ ಆರ್ ಟಿ ಎ ಪಿ ಸಂಖ್ಯೆ 101/2013-14 ರಲ್ಲಿ ಪ್ರಶ್ನಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಂದಾಯ

ನ್ಯಾಯಾಲಯದಲ್ಲಿ ದಿನಾಂಕ 19.09.2015 ರಂದು ಸದರಿ ದಿನಾಂಕ 20.03.1973 ದ ಡೈರಿ ಸಂಖ್ಯೇ 4031ನ್ನು ರದ್ದುಗೊಳಿಸಿ ಪ್ರತಿವಾದಿ ನಂಬರ 6 ಮತ್ತು 7 ರವರ ಹೆಸರನ್ನು ಸೇರಿಸುವಂತೆ ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಕಂದಾಯ ನ್ಯಾಯಾಲಯದ ಆದೇಶದಂತೆ ಕಂದಾಯ ನಿರೀಕ್ಷಕರು ನೇಸರಗಿ ರವರು ದಿಃ 29.07.2015 ರಂದು ಸ್ಥಾನಿಕ ಪರೀಶಿಲನೆ ಮಾಡಿ ಪಂಚನಾಮೆಯನ್ನು ಜರುಗಿಸಿ ಪ್ರತಿವಾದಿ ನಂಬರ 6 ಮತ್ತು 7 ರವರು ಖರೀದಿ ನಾತೆಯಲ್ಲಿ ದಾವಾ ಆಸ್ತಿಯ ಕಬ್ಜಾದಲ್ಲಿರುತ್ತಾರೆ ಎಂದು ವರದಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಸಹ ನಾನು ಯಾವುದೇ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ ಎಂದರೆ ಸರಿ.

ಈರಪ್ಪ ನಿಂಗಪ್ಪ ದಳವಾಯಿ ರವರು ನನಗೆ ಖರೀದಿಗೆ ನೀಡಿರುತ್ತಾರೆ. ನನಗೆ ಅಪ್ಪಯ್ಯಪ್ಪ ರವರು ದಾವಾ ಆಸ್ತಿಯನ್ನು ನನಗೆ ಖರೀದಿಗೆ ನೀಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಅಪ್ಪಯ್ಯ ರವರಿಗೂ ಸಹ ಹಿಸ್ಸೆ ಇತ್ತು ಎಂದರೆ ಸರಿ. ಈರಪ್ಪ ರವರಿಗೆ ತನ್ನ ಹಿಸ್ಸೆ ಮಾರಾಟ ಮಾಡುವ ಅಧಿಕಾರ ಇರುತ್ತದೆ ಎಂದರೆ ಸರಿ. ಈರಪ್ಪ ರವರಿಗೆ ದಾವಾ ಆಸ್ತಿಯಲ್ಲಿ 1/8 ಹಿಸ್ಸೆ ಇರುತ್ತದೆ ಎಂದರೆ ಸರಿ. ಅಂತೆಯೇ ಅಪ್ಪಯ್ಯ ರವರಿಗೆ 1/8 ಹಿಸ್ಸೆ ಇತ್ತು ಎಂದರೆ ಸರಿ. ಹಾಗಾಗಿ ಈರಪ್ಪ ರವರಿಗೆ 1/4 ನೇ ಭಾಗವನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಖರೀದಿ ಪತ್ರ ಕಾನೂರು ಬಾಹಿರವಾಗಿತ್ತು ಎಂದರೆ ಸರಿಯಲ್ಲ. ಹಾಗಾಗೀ ದಾಖಲೆಗಳಲ್ಲಿ ಅಪ್ಪಯ್ಯ ರವರ ಹೆಸರು ಈರಪ್ಪರವರೊಂದಿಗೆ ಜಂಟಿಯಾಗಿ ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಖರೀದಿ ಡೈರಿ ಸಂಖ್ಯೆ 1827ರಲ್ಲಿ ನನ್ನ ಖರೀದಿ ಪತ್ರ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ವಾಟೀ ಸವಾಲುಃ ಸಮಯ ಕೋರಿದ ಕಾರಣ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ